**ಸಾಕ್ಷಿಗೆ ದಿನಾಂಕಃ 02.04.2026 ರಂದು ಪ್ರಮಾಣ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ. ಜಿ.ಆರ್.ಎಸ್. ವಕೀಲರಿಂದಃ**

ಇಂದು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರತಿಜ್ಞಾ ಹೇಳಿಕೆಯಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿವೆ. ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಆರೋಪಿಯು ಸಾಲದ ಮರುಪಾವತಿಗಾಗಿ ನೀಡಿದ ಚೆಕ್‌ನ್ನು ನಿಪಿ-1 ಎಂದು, ಸಹಿಯನ್ನು ನಿಪಿ-1(ಎ) ಎಂದು, ಬ್ಯಾಂಕಿನವರು ಕೊಟ್ಟ ಹಿಂಬರಹವನ್ನು ನಿಪಿ-2 ಎಂದು, ಆರೋಪಿಗೆ ವಕೀಲರ ಮುಖಾಂತರ ಕೊಟ್ಟ ನೋಟೀಸಿನ ಕಚೇರಿ ಪ್ರತಿಯನ್ನು ನಿಪಿ-3 ಎಂದು, 2 ಆರ್.ಪಿ.ಎ.ಡಿ. ರಶೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿ.ಪಿ.4 ಎಂದು, 2 ಆರ್.ಪಿ.ಎ.ಡಿ. ಕವರ್ ಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.5 ಮತ್ತು ನಿ.ಪಿ.6 ಎಂದು ಗುರುತಿಸಲಾಯಿತು. ಆದ್ದರಿಂದ ಆರೋಪಿಯ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು**
**ಜೆ.ಎಂ.ಎಫ್.ಸಿ., ಟಿ.ನರಸೀಪುರ.**